Indian Journal of History and Archaeology

ISSN (E):2582-225X
VOL-1 ISSUE- 6, MARCH-APRIL, 2020, 82-90

# ಮಧ್ಯಕಾಲೀನ ಇತಿಹಾಸದಲ್ಲಿ ಪ್ರಭುತ್ವಗಳ ಶೃಂಗೇರಿ ಮಠದ ಮೇಲಿನ ಆಧ್ಯಾತ್ಮಿಕ ಅವಲಂಬನೆ

ಪ್ರಶಾಂತ್.ಕೆ.ಜಿ.

**ಪ್ರಶಾಂತ್.ಕೆ.ಜಿ.**
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ,
ಶಂಕರಘಟ್ಟ

ಭಾರತೀಯ ಸಂದರ್ಭದಲ್ಲಿ ಪ್ರಭುತ್ವಗಳು ಹಾಗೂ ಧರ್ಮದ ಸಂಬಂಧ ಹಾಗೂ ಒಡನಾಟಗಳು ಕುತೂಹಲಕರ ಹಾಗೂ ಚರ್ಚೆಯ ವಿಷಯವಾಗಿ ಪರಿಣಮಿಸಿದೆ.

ಭಾರತೀಯ ಪ್ರಭುತ್ವಗಳು ಮತ್ತುಧರ್ಮದ ನಡುವಿನ ಸಂಬಂಧ ಸ್ವರೂಪವನ್ನು ನಾವು ಅರ್ಥೈಸುವಲ್ಲಿ ಪ್ರಭುತ್ವಗಳ ಮತಧರ್ಮಗಳೊಂದಿಗಿನ ಸಂಬಂಧ ಹಾಗೂ ಒಡನಾಟಗಳ ವಿವಿಧ ಆಯಾಮಗಳನ್ನು ಅಧ್ಯಯನಕ್ಕೊಳಪಡಿಸಿ ವಿಶ್ಲೇಷಿಸಿ ತೀರ್ಮಾನಕ್ಕೆ ಬರುವ ಅಗತ್ಯವಿದೆ ಎಂದು ಹೇಳಬಹುದಾಗಿದೆ.

ಮಧ್ಯಕಾಲೀನ ಇತಿಹಾಸದಲ್ಲಿ ಕ್ರಿ.ಶ.1336ರಲ್ಲಿ ವಿಜಯನಗರ ಸಾಮ್ರಾಜ್ಯದ ಉದಯದಲ್ಲಿ ಶೃಂಗೇರಿಯ ಗುರು ವಿದ್ಯಾರಣ್ಯ ಸ್ವಾಮಿಗಳ ಪಾತ್ರದಿಂದ [1] ವಿಜಯನಗರದ ಅರಸರ ಶೃಂಗೇರಿ ಮಠದ ಮೇಲಿನ ಆಧ್ಯಾತ್ಮಿಕ ಅವಲಂಬನೆಯನ್ನು ಐತಿಹಾಸಿಕ ದಾಖಲೆಗಳಿಂದ ತಿಳಿಯಬಹುದಾಗಿದೆ.
ಶೃಂಗೇರಿ ಮಠವು ವಿಜಯನಗರದ ದೊರೆಗಳ ಪೋಷಣೆಯಿಂದ ಒಂದು ವ್ಯವಸ್ಥಿತ ಆಡಳಿತ ಸಂಸ್ಥೆಯಾಗಿ ಬೆಳೆಯಿತಲ್ಲದೇ ತನ್ನದೇಆದ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡು, ಸಮಕಾಲೀನ ರಾಜರ ಸಹಕಾರದಿಂದ ತನ್ನ ಅಧಿಕಾರವನ್ನು ವಿಸ್ತರಿಸಿಕೊಂಡು, ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ತನ್ನ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ತನ್ನದೇ ಆದ ಕಾಯಿದೆ ಕಾನೂನನ್ನು ರಚಿಸಿಕೊಂಡು ಆಡಳಿತ ನಡೆಸುತ್ತಿತ್ತು.

[1] ಬುಖನನ್ ಹಾಮಿಲ್ಟನ್, "ದಿ ಜರ್ನಿ ಫ್ರಂ ಮದ್ರಾಸ್‌ತ್ರೂ ಮೈಸೂರು, ಕೆನರಾಎಂಡ್ ಮಲಬಾರ್" (111,110–115)

ಹೀಗೆ ವಿಜಯನಗರದ ರಾಜರುಗಳು ನೀಡಿದ ಭೂದಾನ, ದತ್ತಿ, ದ್ರವ್ಯಗಳಿಂದ ಶೃಂಗೇರಿ ಮಠವುಒಂದು **"ಧರ್ಮ ಸಂಸ್ಥಾನವಾಗಿ"** ರೂಪುಗೊಂಡಿರುವುದನ್ನು ನಾವು ಕಾಣಬಹುದು. ಈ ಸಂಸ್ಥಾನಕ್ಕೆ ಆಡಳಿತ ಪದ್ಧತಿಯು ಅನಿವಾರ್ಯವಾಗಿ ಮಠವು ಆಡಳಿತ ಕೇಂದ್ರವಾಯಿತು. ಪ್ರಭುತ್ವಗಳೊಂದಿಗೆ ಆಡಳಿತಾತ್ಮಕ ಸಂಬಂಧವನ್ನು ಹೊಂದಿತ್ತು. ಮಠವು ಧರ್ಮ ಸಂಸ್ಥಾನವಾಗಿ ಪರಿವರ್ತಿತವಾದ ಮೇಲೆ ಅದು ಆರ್ಥಿಕ ಕೇಂದ್ರವಾಗಿಯೂ, ಸಾಮಾಜಿಕ, ಧಾರ್ಮಿಕ ಕೇಂದ್ರವಾಗಿಯೂ ಅಭಿವೃದ್ಧಿ ಹೊಂದಿದ್ದನ್ನು ನಾವು ಐತಿಹಾಸಿಕ ಅಧ್ಯಯನದಿಂದ ತಿಳಿದುಕೊಳ್ಳಬಹುದಾಗಿದೆ. ಹೀಗೆ ಶೃಂಗೇರಿ ಮಠವು ಪ್ರಭುತ್ವಗಳೊಂದಿಗೆ ಆರ್ಥಿಕ, ಸಾಮಾಜಿಕ, ಆಡಳಿತಾತ್ಮಕ ಹಾಗೂ ಧಾರ್ಮಿಕ ಅವಲಂಬನೆಯನ್ನು ಹೊಂದಿತ್ತೆಂದು ತಿಳಿಯಬಹುದಾಗಿದೆ. ಕಡತ, ಭಿನ್ನವತ್ತಳೆ, ನಿರೂಪಗಳು, ಶಿಲಾಶಾಸನಗಳು, ತಾಮ್ರ ಶಾಸನಗಳು, ಐತಿಹಾಸಿಕ ಗ್ರಂಥಗಳು, ಐತಿಹಾಸಿಕ ಕಾವ್ಯ, ಜೀವನ ಚರಿತ್ರಗಳು ಮಧ್ಯಕಾಲೀನ ಪ್ರಭುತ್ವಗಳಿಗೂ ಶೃಂಗೇರಿ ಮಠಕ್ಕೂ ಇರುವ ಆಧ್ಯಾತ್ಮಿಕ, ಆಡಳಿತಾತ್ಮಕ, ಸಾಮಾಜಿಕ ಹಾಗೂ ಆರ್ಥಿಕ ಅವಲಂಬನೆಯನ್ನು ಚಿತ್ರಿಸುವಲ್ಲಿ ಸಹಕರಿಸುತ್ತದೆ.[2]

ಪ್ರಭುತ್ವಗಳ ಶೃಂಗೇರಿ ಮಠದ ಮೇಲಿನ ಆಧ್ಯಾತ್ಮಕ ಅವಲಂಬನೆಯನ್ನು ದಾಖಲೆಗಳ ಆಧಾರದಿಂದ ವಿಶ್ಲೇಷಿಸಿ ನಿರೂಪಿಸುವುದು ಈ ಪತ್ರಿಕೆಯ ಉದ್ದೇಶವಾಗಿದೆ.

ಶೃಂಗೇರಿಯ ಶೃಂಗಪುರ ದಾನ ಶಾಸನವು ವಿಜಯನಗರ ಮತ್ತು ಶೃಂಗೇರಿ ಮಠದ ಇತಿಹಾಸದ ದೃಷ್ಟಿಯಿಂದ ಅತ್ಯಂತ ಪ್ರಮುಖವಾದುದಾಗಿದೆ. ಮಾರ್ಚ್ 9, 1346ರ ಈ ಶಾಸನವು ವಿಜಯನಗರದ ದೊರೆ ಹರಿಹರ ತನ್ನ ತಮ್ಮಂದಿರೊಂದಿಗೆ ಶೃಂಗೇರಿಗೆ ಬಂದು ಗುರು ಭಾರತೀತೀರ್ಥರಿಗೆ ಮತ್ತು ಅವರ ಪರಿಚಾರಕರಿಗೆ ಕೊಟ್ಟ ಭೂದಾನವನ್ನು ವಿವರಿಸುತ್ತದೆ. ಈ ದಾನ ಶಾಸನದ ಆರಂಭದಲ್ಲಿ "ವಿದ್ಯಾತೀರ್ಥಾಯಗುರುವೇ ಪರಸ್ಮೈತೇಜಸೇ ನಮಃ" ಎಂಬ, ಶ್ಲೋಕವಿದ್ದು "ವಿದ್ಯಾತೀರ್ಥರೆಂಬ ಪರಂಜ್ಯೋತಿಗೆ ಪ್ರಣಾಮಗಳು" ಎಂಬ ಅರ್ಥವನ್ನು ಕೊಡುತ್ತದೆ. ವಿಜಯನಗರದ ದೊರೆಗಳು ಶೃಂಗೇರಿಯ ವಿದ್ಯಾತೀರ್ಥ ಗುರುಗಳನ್ನು ಆಧ್ಯಾತ್ಮಿಕ ದೃಷ್ಟಿಯಿಂದ ಉನ್ನತ ಸ್ಥಾನದಲ್ಲಿ ಇರಿಸಿದ್ದನ್ನು ಈ ಶ್ಲೋಕವು ನಮಗೆ ತಿಳಿಸುತ್ತದೆ.

[2]ಪ್ರೊ.ಹೆಚ್.ಸಿ.ವೀರಪ್ಪಗೌಡ, "ಚಾರಿತ್ರಿಕ ಹಿನ್ನೆಲೆಯಲ್ಲಿ ಶೃಂಗೇರಿ ಸಂಸ್ಥಾನದಆರ್ಥಿಕಅಧ್ಯಯನಕ್ರಿ.ಶ 1336–1959", 2015.

ಕ್ರಿ.ಶ. 1336ರ ತಾಮ್ರಶಾಸನವು ವಿದ್ಯಾರಣ್ಯರ ಮಾರ್ಗದರ್ಶನದ ಮೇರೆಗೆ ಹರಿಹರೇಶ್ವರನು ಸಿಂಹಾಸನಾ ರೂಢನಾದ ವಿಚಾರವನ್ನು ವಿವರಿಸುತ್ತದೆ. ಈ ಸಂದರ್ಭದಲ್ಲಿ ಹರಿಹರನು ಹದಿನಾರು ದಾನಗಳನ್ನು ಕೊಟ್ಟನು.

"The sage took them under his spiritual protection and the next encounter gave them victory. Following the sage VidyaranyasCouncel they established a kingdom which they extended by further conquests. Directed by the sage Harihara had founded a city on a site near the Tungabhadra"ಎಂದು "The throne of Transcendental wisdom"ಕೃತಿಯಲ್ಲಿ ಕೆ. ಆರ್.ವೆಂಕಟರಾಮನ್‌ರವರು ವಿದ್ಯಾರಣ್ಯರ ಆಧ್ಯಾತ್ಮಿಕ ಪ್ರಭಾವವು ವಿಜಯನಗರದ ದೊರೆಗಳಿಗೆ ಯುದ್ಧದಲ್ಲಿ ಜಯಶಾಲಿಯಾಗಲು ಹಾಗೂ ಸಾಮ್ರಾಜ್ಯ ಸಂಸ್ಥಾಪಿಸುವಲ್ಲಿ ಪ್ರಮುಖಪಾತ್ರ ವಹಿಸಿತ್ತೆಂದು ಅಭಿಪ್ರಾಯಪಡುತ್ತಾರೆ.

ಕ್ರಿ.ಶ. 1384 ರ ಬೆಳಗುಳ ಶಾಸನವು "ವಿದ್ಯಾರಣ್ಯ ಮುನೀಶಸ್ಯ ಕೃಪಾ ಪೂರ್ಣ ನಿರೀಕ್ಷಣಾತ್‌ಯೋ ಲಬ್ಧ ಜ್ಞಾನ ಸಾಮ್ರಾಜ್ಯಮ್‌ದೃಷ್ಟಪಮಿತರೈನೃಪೈಃ" (ಬೆಳಗುಳ CP S–1306)

ಅಂದರೆ ವಿದ್ಯಾರಣ್ಯರು ವಿಜಯನಗರದ ದೊರೆಗಳಿಗೆ ಆಧ್ಯಾತ್ಮದ ಬೋಧನೆಯನ್ನು ಮಾಡಿದುದನ್ನುತಿಳಿಸುತ್ತದೆ.[3]

ಫೆಬ್ರವರಿ 2, 1356ರ ಶಿಲಾಶಾಸನವು ವೀರಬುಕ್ಕನು ಶೃಂಗೇರಿಗೆ ಭೇಟಿ ನೀಡಿ ವಿದ್ಯಾಶಂಕರ ದೇವಾಲಯಕ್ಕೆ ಬಂದು ವಿದ್ಯಾತೀರ್ಥ ಗುರುಗಳ ಸಮಾಧಿ ಲಿಂಗದದರ್ಶನ ಪಡೆದು ಕೆಲವಳ್ಳಿ ಗ್ರಾಮವನ್ನು ಯತಿ ಭಿಕ್ಷೆಗಾಗಿ ದಾನಮಾಡಿದುದನ್ನು ತಿಳಿಸುತ್ತದೆ. ಈ ಶಾಸನದ ಪ್ರಾರಂಭದ ಶ್ಲೋಕವು "ವಿದ್ಯಾತೀರ್ಥಯತೀಂದ್ರೋಯಮತಿಶೇತೇ ದಿವಾಕರಂ, ತಮೋಹರತಿಯತ್ತುಂಸಾಮಂತರ್ಬಹಿರಹರ್ನಿಶಂ". ಹೀಗಿದ್ದು ವಿದ್ಯಾತೀರ್ಥ ಯತಿಗಳು ಸೂರ್ಯನಿಗಿಂತಲೂ ಮಿಗಿಲು, ಹೇಗೆಂದರೆ ವಿದ್ಯಾತೀರ್ಥ ಗುರುಗಳು ಆಂತರಿಕ ಮತ್ತು ಬಾಹ್ಯಕತ್ತಲನ್ನು ಹಗಲು ಮತ್ತು ಇರಳು ಕೂಡ ಹೋಗಲಾಡಿಸುವ ಸಾಮರ್ಥ್ಯವುಳ್ಳವರೆಂದು ವಿದ್ಯಾತೀರ್ಥ ಗುರುಗಳ ಆಧ್ಯಾತ್ಮಿಕ ಹಿರಿಮೆಯನ್ನು ವಿಜಯನಗರದ ವೀರಬುಕ್ಕಣ್ಣೊಡೆಯನು ಶಾಸನದ ಆರಂಭಿಕ ಶ್ಲೋಕದಲ್ಲಿ ವ್ಯಕ್ತಪಡಿಸಿರುವುದನ್ನು ನಾವು ಕಾಣಬಹುದಾಗಿದೆ.

[3]ಕೆ.ಆರ್.ವೆಂಕಟರಾಮನ್‌ರ.ಕೃತಿ "ದಿ ತ್ರೋನ್‌ಆಫ್‌ಟ್ರಾನ್ಸಿಡೆಂಟಲ್ ವಿಸ್ಡಮ್", ಪೇಜ್ –41 The Acharya initiated the emperor in to the mysteries of Advaiticmeditation"ಎಂದು ವಿವರಿಸಿದ್ದಾರೆ.

ನವೆಂಬರ್ 27, 1380 ರಲ್ಲಿ ವಿಜಯನಗರದ ವೀರ ಹರಿಹರ ಮಹಾರಾಯನು (2ನೇ ಹರಿಹರ) ಶೃಂಗೇರಿ ವಿದ್ಯಾರಣ್ಯ ಗುರುಗಳಿಗೆ ತಾಮ್ರಶಾಸನವೊಂದನ್ನು ಒಪ್ಪಿಸಿದ್ದು ಇದು ಶೃಂಗೇರಿಯಲ್ಲಿ ವಿದ್ಯಾಶಂಕರ ದೇವಾಲಯವನ್ನು ನಿರ್ಮಿಸುವ ಸಂದರ್ಭದಲ್ಲಿಕೊಟ್ಟ ಭೂದಾನದ ವಿವರವನ್ನು ಒಳಗೊಂಡಿದೆ.

ಈ ತಾಮ್ರಶಾಸನದ ದ್ಯಾನ ಶ್ಲೋಕದಲ್ಲಿ ವಿದ್ಯಾರಣ್ಯರನ್ನು ಕುರಿತು... "ವಾಚಾಲಂ ಕುರುತೇ ಮೂಕಂ, ಮೂಕಂ ವಾಚಾಲ ಪುಂಗವಂ, ವಿದ್ಯಾರಣ್ಯ ಗುರೋಶ್ಚಿತ್ರಂ ಚರಿತ್ರಂಚತುರಾನನಾತ್".. ವಿದ್ಯಾರಣ್ಯರು ಮಾತು ಬಾರದವನನ್ನು ಒಳ್ಳೆಯ ಮಾತುಗಾರನನ್ನಾಗಿಯೂ, ಮಾತನಾಡುವವನನ್ನು ಮೂಕ (ಮಂತ್ರ ಮುಗ್ಧ) ನನ್ನಾಗಿಯೂ ಮಾಡುವ ಅಂತಃಶಕ್ತಿಯನ್ನು ಹೊಂದಿದ್ದಾರೆಂದು ಅರ್ಥ ಬರುವಂತೆ ಹೇಳಲಾಗಿದೆ. ಹೀಗೆ ಪ್ರತಿಯೊಂದು ಶಾಸನಗಳಲ್ಲಿಯೂ ಗುರುಗಳ ಆಧ್ಯಾತ್ಮಿಕ ಔನ್ನತ್ಯವನ್ನು ರಾಜರು ಗೌರವಿಸಿದುದನ್ನು ಕಾಣಬಹುದಾಗಿದೆ.

ಶೃಂಗೇರಿಯ ಗುರು ವಿದ್ಯಾರಣ್ಯರ ವಿದೇಹ ಮುಕ್ತಿಯ ಸಂದರ್ಭದಲ್ಲಿ (A.D. 1387) ವಿಜಯನಗರದ ಎರಡನೇ ಹರಿಹರನು ಭೂದಾನವನ್ನು ಕೊಟ್ಟು ಒಂದು ತಾಮ್ರಶಾಸನವನ್ನು ಸಮರ್ಪಿಸುತ್ತಾರೆ. ಇದು ವಿದ್ಯಾರಣ್ಯ ಪುರಾಗ್ರಹಾರದಾನ ಶಾಸನವೆಂದು ಪ್ರಸಿದ್ಧಿಯನ್ನು ಹೊಂದಿದೆ. ಈ ತಾಮ್ರಶಾಸನದ ಧ್ಯಾನಶ್ಲೋಕವು ಎಂದಿನಂತೆ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ ಇತ್ಯಾದಿ ಸಾಲುಗಳಿಂದ ಪ್ರಾಂರಭವಾಗುತ್ತದೆ.

ಮೂವತ್ತು ಸಾಲುಗಳ ಧ್ಯಾನಶ್ಲೋಕದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೂ ಶೃಂಗೇರಿ ಗುರುಗಳಿಗೂ ಇರುವ ಅನ್ಯೋನ್ಯ ಸಂಬಂಧವನ್ನು ಕಾವ್ಯಾತ್ಮಕವಾಗಿ ವರ್ಣಿಸಲ್ಪಟ್ಟಿದ್ದು ಈ ಸಂಬಂಧ ಸ್ವರೂಪದ ಆಧ್ಯಾತ್ಮಿಕ ಹಿನ್ನೆಲೆಯನ್ನು ತಿಳಿದುಕೊಳ್ಳಲು ನಮಗೆ ಸಹಕರಿಸುತ್ತದೆ.

ಈ ತಾಮ್ರಶಾಸನದ 14ನೇ ಸಾಲಿನಲ್ಲಿ "ವಿದ್ಯಾರಣ್ಯಗುರೋರ್ದಯಾಮೃತ ಮುಚ ಶ್ರೇಷ್ಠಾ: ಕಟಕ್ಷಾಂಕುರಾಃ, ಕಿಂ ಬ್ರಹ್ಮಾನಚತುರ್ಮುಖಃಕಿಮುಹರಿರ್ದ್ರೋಪ್ಲಣೋರ್ನಚಾಮ್ರೇಡಿತಂ ಕಿಂವಾಂ ಶಂಭುರಸೌ ನ ದೃಷ್ಟಿ ವಿಷಯೇ ವೈಷಮ್ಯ ಮಾಲಕ್ಷ್ಯತೆ, ಇತ್ಯಾಲೋಚ್ಯಚಿರಂ ವಿನಿಶ್ಚಿತಧಿಯಃ ಪಶ್ಚಾದ್ವಿಪಶ್ಚಿದ್ಗಣಾಃ ವಿದ್ಯಾರಣ್ಯಗುರುಂಕಿಮಪ್ಯವಯಾ ವಿಜ್ಯೋತಿಃ ಪರಂ ಪನ್ವತೇ" ("can he be brahma? We donot see four faces. Can he be Vishnu? He has not got four arms, can he be Shiva? No oddness of the eye is observed. Having thus argued for a long time the learned have come to the conclusion that Vidyaranya is the supreme light incarnate") ವಿದ್ಯಾರಣ್ಯರು ನಾಲ್ಕು ತಲೆಗಳನ್ನು ಹೊಂದದಿರುವುದರಿಂದ

ಅವರು ಬ್ರಹ್ಮನಲ್ಲ, ನಾಲ್ಕು ಕೈಗಳನ್ನು ಹೊಂದದಿರುವುದರಿಂದ ವಿಷ್ಣುವೆಂದು ಹೇಳಲಾಗುವುದಿಲ್ಲ, ಶಿವನೆಂದು ತಿಳಿಯೋಣವೆಂದರೆ ಮೂರನೇ ಕಣ್ಣನ್ನು ಹೊಂದಿಲ್ಲ. ಹೀಗೆ ಚರ್ಚೆ ಮಾಡುತ್ತಾ ಪಂಡಿತರುಗಳು ವಿದ್ಯಾರಣ್ಯರು ಪರಂಜ್ಯೋತಿಯ ಅವತಾರವೇ ಆಗಿದ್ದಾರೆಂದು ಅಭಿಪ್ರಾಯ ಪಟ್ಟರೆಂದು ಈ ಸಾಲುಗಳು ತಿಳಿಸುತ್ತದೆ.

ಇದೇ ತಾಮ್ರಶಾಸನದ ಇನ್ನೊಂದು ಶ್ಲೋಕವು "ವಿದ್ಯಾತೀರ್ಥಜ್ಜನಿನಿಮಿತಿ ಶುಭೇ ಭಾರತೀತೀರ್ಥ ಪದ್ಮೇ ನಿತ್ಯಂ ವೃತ್ತಾದ್ವಯಾಚಿದಮೃತಾನಂದ ಸೌರಭ್ಯ ಭಾಜಿ, ವಿದ್ಯಾರಣ್ಯದ್ಯುಮಣಿ ಮಹಿಮಾ ಪ್ರಾಪ್ತ ಲಕ್ಷ್ಮೀ ವಿಕಾಸೇ ಭೂಯೋ ಬೂಯೋ ವಿಹರತಿ ಸುಖೀ ಬುಕ್ಕ ಬೂಪಾಲಹಂಸ: – "The swan Bukka sports happily near the lotus Bharatitertha which having sprung from Vidyatirtha possesses the fragrance of joy from a knowledge of non-dualism and expands by the rays of Vidyaranya" – ವಿದ್ಯಾತೀರ್ಥ ಸರೋವರದಲ್ಲಿ ಹುಟ್ಟಿದ ಭಾರತೀತೀರ್ಥರೆಂಬ ಪದ್ಮವು ಹೊರಸೂಸುವ ಅದ್ವೈತವೆಂಬ ಜ್ಞಾನದಿಂದ ಬಂದ ಪರಮೋಲ್ಲಾಸವನ್ನು ಬುಕ್ಕನೆಂಬ ಹಂಸವು ಆನಂದಿಸುತ್ತಿದೆ ಎಂಬ ಅರ್ಥವನ್ನು ಕೊಡುವ ಈ ಸಾಲುಗಳು ವಿಜಯನಗರಕ್ಕೂ ಶೃಂಗೇರಿ ಗುರುಗಳಿಗೂ 630 ವರ್ಷಗಳಷ್ಟು ಹಿಂದೆಇದ್ದ ನಿಕಟ ಆಧ್ಯಾತ್ಮಿಕ ಅವಲಂಬನೆ, ಬಾಂಧವ್ಯಕ್ಕೆ ಸಾಕ್ಷಿಯಾಗಿದೆ. ಹೀಗೆ ವಿಜಯನಗರದ ರಾಜರ ಶಾಸನಗಳು ಕೇವಲ ಭೂದಾನ, ಕೊಡುಗೆಗಳ ಬಗ್ಗೆ ಮಾತ್ರ ಉಲ್ಲೇಖಿಸದೆ ಅವುಗಳ ಧ್ಯಾನಶ್ಲೋಕಗಳು ಐತಿಹಾಸಿಕ ಅಂಶಗಳನ್ನು ಹೊಂದಿರುವುದು ಬೆಳಕಿಗೆ ಬರುತ್ತ ಈ ಸಂಬಂಧ ಸ್ವರೂಪದ ಅಧ್ಯಯನಕ್ಕೆ ಇನ್ನೊಂದು ಆಯಾಮವನ್ನು ಕೊಡುತ್ತದೆಂದರೆ ತಪ್ಪಾಗಲಾರದು.

ಹೀಗೆ ನೋಡಿದರೆ ಭಾರತೀಯ ಸಂಸ್ಕೃತಿಯಲ್ಲಿ ರಾಜರು ಹಾಗೂ ಪ್ರಜೆಗಳೂ ಕೂಡ ಉನ್ನತ ಆಧ್ಯಾತ್ಮಿಕ ಉಪಾಸಕರನ್ನು, ಸನ್ಯಾಸಿಗಳನ್ನು, ಧಾರ್ಮಿಕ ವ್ಯಕ್ತಿಗಳನ್ನು ಸಮಾಜದಲ್ಲಿ ಗುರು ಸ್ಥಾನದಲ್ಲಿರಿಸಿ ಶ್ರದ್ಧಾಭಕ್ತಿಗಳಿಂದ ನಡೆದುಕೊಂಡಿರುವುದನ್ನು ನಾವು ಕಾಣಬಹುದಾಗಿದೆ.

ಆಧ್ಯಾತ್ಮಿಕ ಉಪಾಸನೆಯಿಂದ ಮತ್ತು ಆಚರಣೆಯು ರಾಜ್ಯದ ಮತ್ತು ಪ್ರಜೆಗಳ ಕಲ್ಯಾಣವನ್ನು ಶ್ರೇಯೋಭಿವೃದ್ಧಿಯನ್ನುಂಟು ಮಾಡುತ್ತದೆಂಬ ಪ್ರಬಲವಾದ ನಂಬಿಕೆಯು ಭಾರತೀಯರಲ್ಲಿದೆ ಎಂದು ಈ ಸಂದರ್ಭದಲ್ಲಿ ಹೇಳಬಹುದಾಗಿದೆ.

ಸಂಗಮ ವಂಶದ ಹಕ್ಕ–ಬುಕ್ಕರು ಎಂದು ವಿದ್ಯಾರಣ್ಯರಿಂದ ಆತ್ಮವಿದ್ಯೆಯನ್ನು ಬೋಧಿಸಲ್ಪಟ್ಟು ವಿಜಯನಗರವೆಂಬ ಸಾಮ್ರಾಜ್ಯವನ್ನು ನಿರ್ಮಿಸುವುದರಲ್ಲಿ ಯಶಸ್ಸನ್ನು ಕಂಡರೋ ಅಂದಿನಿಂದ ಶೃಂಗೇರಿ

ಪೀಠದ ಗುರುಗಳ ಆಧ್ಯಾತ್ಮಿಕ ಶಕ್ತಿಯು ವಿಜಯನಗರೋತ್ತರ ರಾಜ ಮಹಾರಾಜರುಗಳಿಗೆ ಒಂದು ರೀತಿಯ ಪ್ರಭಾವವನ್ನು ಬೀರಲು ಪ್ರಾರಂಭಿಸಿದುದನ್ನು ನಾವು ಕಾಣಬಹುದು.

ವಿಜಯನಗರದ ಪ್ರಸಿದ್ಧ ರಾಜ ಶ್ರೀಕೃಷ್ಣದೇವರಾಯನು (151–15) ಕಳಿಂಗದ ಗಜಪತಿ ರಾಜ ಪ್ರತಾಪರುದ್ರನನ್ನು ಸೋಲಿಸಲು ಶೃಂಗೇರಿಗುರು ಪುರುಷೋತ್ತಮ ಭಾರತೀ ಗುರುಗಳ ಆಶೀರ್ವಾದವು ಮುಖ್ಯ ಪಾತ್ರ ವಹಿಸಿತೆಂಬ ಐತಿಹಾಸಿಕ ಉಲ್ಲೆಖವನ್ನು ಪ್ರೊ॥ ಎ.ವಿ.ನರಸಿಂಹ ಮೂರ್ತಿಯವರು ತಮ್ಮ "ದಿ ಹೋಲಿ ಅಬೋಡ್ ಆಫ್ ದಿ ಶಂಕರಾಚಾರ್ಯರ್ಸ್ ಆಫ್ ದಿ ಸೌತ್" ಎಂಬ ಕೃತಿಯಲ್ಲಿ ಕಾಣಬಹುದಾಗಿದೆ.

ಕೃಷ್ಣದೇವರಾಯನು ಕಳಿಂಗ ಯುದ್ಧದ ಜಯಕ್ಕೆ ಶೃಂಗೇರಿ ಗುರುಗಳಿಗೆ ಕೃತಜ್ಞತೆಯನ್ನು ಸಲ್ಲಿಸುವ ಸಲುವಾಗಿ ಎರಡು ನಿರೂಪಗಳನ್ನು ಸಲ್ಲಿಸಿ ಸೆಪ್ಟೆಂಬರ್ 9, 1515 ಹುಯ್ಯಾರು ಎಂಬ ಗ್ರಾಮವನ್ನು ಸರ್ವಮಾನ್ಯವನ್ನಾಗಿಸಿ ವಿದ್ಯಾರಣ್ಯರಿಗೆ ಹಂಪೆಯ ವಿರೂಪಾಕ್ಷ ದೇವಾಲಯದ ಸಮಕ್ಷಮದಲ್ಲಿ ದಾನಾಪೂರ್ವಕವಾಗಿ ಸಲ್ಲಿಸಿದರೆಂಬ ವಿವರವನ್ನು ಈ ನಿರೂಪದಲ್ಲಿ ಕಾಣಬಹುದಾಗಿದೆ.

ವಿಜಯನಗರದ ಅರವೀಡು ವಂಶದ ವೀರ ದೇವರಾಯನು **A.D. 1842**ರಲ್ಲಿ ಶೃಂಗೇರಿ ಮಠಕ್ಕೆ ಕೊಟ್ಟ ಜಹಗೀರಿ ದಾನಪತ್ರದಿಂದ ರಾಜನು ತನ್ನ ಸಂಸ್ಥಾನದ ಶ್ರೇಯೋಭಿವೃದ್ಧಿ ಹಾಗೂ ತನ್ನ ಒಳಿತಿಗಾಗಿ ನರಸಿಂಹ ಭಾರತೀ ಸ್ವಾಮಿಗಳ ಚರಣಾರವಿಂದಗಳಿಗೆ ಈ ಗ್ರಾಮ ದಾನವನ್ನು ಮಾಡುತ್ತಿದ್ದುದಾಗಿ ಹೇಳಿಕೊಂಡಿದ್ದಾನೆ.

ಹೀಗೆ ಸಂಸ್ಥಾನದ ಶ್ರೇಯೋಭಿವೃದ್ಧಿ, ರಾಜ್ಯದ ಸುಭಿಕ್ಷೆ, ರಾಜರ ಶ್ರೇಯಸ್ಸು, ಶತ್ರುಕ್ಷಯ, ಯುದ್ಧದಲ್ಲಿ ವಿಜಯ ಇತ್ಯಾದಿ ಕಾರಣಗಳಿಗಾಗಿ ವಿಜಯನಗರದ ದೊರೆಗಳು ಶೃಂಗೇರಿ ಗುರುಗಳ ಆಧ್ಯಾತ್ಮಿಕ ಶಕ್ತಿಗೆ ಮೊರೆಹೋಗಿ ಯಶಸ್ಸನ್ನು ಪಡೆದರೆಂದು ಹಲವಾರು ಶಾಸನ, ನಿರೂಪ, ಭಿನ್ನವತ್ತಳೆ, ಪತ್ರಗಳಿಂದ ತಿಳಿಯಬಹುದಾಗಿದೆ.

ವಿಜಯನಗರದ ಪತನಾನಂತರ ಮೈಸೂರ ಒಡೆಯರು, ಹೈದರಾಲಿ, ಟಿಪ್ಪು, ಕೆಳದಿ ನಾಯಕರು, ದಿವಾನ್ ಪೂರ್ಣಯ್ಯ, ಶೇಷಾದ್ರಿ ಅಯ್ಯರ್ ಮುಂತಾದ ದಿವಾನರು ಶೃಂಗೇರಿ ಗುರುಗಳಲ್ಲಿ ಆಧ್ಯಾತ್ಮಿಕ ಒಡನಾಟಗಳನ್ನು ಇಟ್ಟುಕೊಂಡಿದ್ದನ್ನು ಕಡತ, ಪತ್ರಗಳು ಹಾಗೂ ಇನ್ನಿತರ ದಾಖಲೆಗಳು ತಿಳಿಸಿಕೊಡುತ್ತವೆ.

ಮೈಸೂರಿನ ದಿವಾನ್ ಪೂರ್ಣಯ್ಯ ಕ್ರಿ.ಶ.1803 ರಲ್ಲಿ ಶೃಂಗೇರಿ ಗುರುಗಳಲ್ಲಿ ಪರ್ಜನ್ಯ ಜಪಕ್ಕಾಗಿ ನಿವೇದಿಸಿ ತನ್ನ ಪತ್ರದಲ್ಲಿ ಗುರುಗಳ ತಪಸ್ಸಿನಿಂದ ಹಾಗೂ ಮಲಹಾನಿಕರೇಶ್ವರ ದೇವರ ಕೃಪೆಯಿಂದ ರಾಜ್ಯದಲ್ಲಿ ಧಾರಾಕಾರವಾಗಿ ಮಳೆಯಾದುದಕ್ಕೆ ಗುರುಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದರು.

ಕ್ರಿ.ಶ. 1854ರಲ್ಲಿ ಮೈಸೂರಿನ ಮುಮ್ಮಡಿ ಕೃಷ್ಣರಾಜರು ಶೃಂಗೇರಿ ಗುರುಗಳಿಂದ ಶಿವಗೀತೆ ಎಂಬ ಪವಿತ್ರ ಗ್ರಂಥದ ರಹಸ್ಯವನ್ನು ಭೋದಿಸಲ್ಪಟ್ಟರೆಂದು ಒಂದು ದಾಖಲೆಯು ತಿಳಿಸುತ್ತದೆ.

ಮೈಸೂರಿನ ಬ್ರಿಟಿಷ್ ಕಮಿಷನರ್ ಬೌರಿಂಗ್ ಸಾಹೇಬರ 30 ಡಿಸೆಂಬರ್ 1867ರ ವಿಜ್ಞಾಪನಾ ಪತ್ರದಲ್ಲಿ ಶೃಂಗೇರಿ ಗುರುಗಳನ್ನು ಕುರಿತು “the guru as the head of the smartha faith has always been treated with peculiar honours enjoyed by no other spiritual preceptor” ಎಂಬ ಉಲ್ಲೇಖದಿಂದ ಕಲೋನಿಯಲ್ ಆಡಳಿತದ ಕಾಲಘಟ್ಟದಲ್ಲಿ ಶೃಂಗೇರಿ ಗುರುಗಳು ಆಧ್ಯಾತ್ಮಿಕ ಸ್ಥಾನಮಾನಗಳು ಹೇಗಿತ್ತೆಂದು ತಿಳಿಯಬಹುದಾಗಿದೆ.

27 ಜುಲೈ 1868ರಲ್ಲಿ ಕಮಿಷನರ್ ಬೌರಿಂಗನು ಬ್ರಿಟಿಷ್ ಭಾರತದ ಸರಕಾರಕ್ಕೆ ಬರೆದ ಪತ್ರದ ದಾಖಲೆಯಲ್ಲಿ “The sringeri is the acknowledged spiritual director not only of the grater proportions of the Hindu of south India but also of those leading marata house, such as Holkrs and the former peshwas. It may be said that his influence is for greater than that of any spiritual guide in India, and I presume it is for this reason that he is regarded with such unlimited respect”.ಹೀಗೆ ನರಸಿಂಹ ಭಾರತೀ ಗುರುಗಳ ಆಧ್ಯಾತ್ಮಿಕ ಸ್ಥಾನಮಾನಗಳನ್ನು ಬೌರಿಂಗ್ ಸಾಹೇಬರ ಪತ್ರವು ತಿಳಿಸುತ್ತದೆ.

ಟಿಪ್ಪು ಸುಲ್ತಾನನ ಹಲವಾರು ಪತ್ರದ ದಾಖಲೆಗಳು ಶೃಂಗೇರಿ ಗುರುಗಳಿಗೂ ಟಿಪ್ಪೂ ಸುಲ್ತಾನನಿಗೂ ಇರುವ ಸಂಬಂಧಗಳ ಪ್ರತೀಕವಾಗಿದೆ.

ಜುಲೈ 18, 1791ರ ಟಿಪ್ಪು ಸುಲ್ತಾನನ ಪತ್ರದ ದಾಖಲೆಯಲ್ಲಿ ಆತನು ಶೃಂಗೇರಿ ಗುರುಗಳಿಗೆ ಪಲ್ಲಕ್ಕಿಯೊಂದನ್ನು ಸ್ವೀಕರಿಸುವಂತೆ ಭಿನ್ನವಿಸುತ್ತಾನೆ. ಶಾರದಮ್ಮನ ಮೂರ್ತಿಯ ಪುನರ್ ಪ್ರತಿಸ್ಥಾಪನೆಗೆ ದ್ರವ್ಯವನ್ನು ಕಳಿಸುತ್ತಾನೆ. ಶತ್ರು ನಾಶಕ್ಕಾಗಿ ಹಾಗೂ ಸರಕಾರದ ಶ್ರೇಯೋಭಿವೃದ್ಧಿಗಾಗಿ ತಪಸ್ಸು ಮಾಡುವಂತೆ ಸಚ್ಚಿದಾನಂದ ಭಾರತೀ ಗುರುಗಳಲ್ಲಿ ಕೇಳಿಕೊಳ್ಳುತ್ತಾನೆ.

ಜುಲೈ 27, 1791ರ ಇನ್ನೊಂದು ಪತ್ರದಾಖಲೆಯಲ್ಲಿ "ಸದಾ ಈಶ್ವರನನ್ನು ಧ್ಯಾನ ಮಾಡುವುದು. ಈಶ್ವರನ ಕಟಾಕ್ಷದಿಂದಲು ಆಶೀರ್ವಾದದಿಂದಲು ಲೋಕಕ್ಕೆ ಉಪದ್ರ ಶೀಘ್ರ ಪರಿಹಾರವಾದೀತು" ಎಂಬುದಾಗಿ ಟಿಪ್ಪು ಸುಲ್ತಾನನು ವಿವರಿಸುತ್ತ ಈ ಒಂದು ಆಧ್ಯಾತ್ಮಿಕ ಶಕ್ತಿಯಲ್ಲಿ ಬಲವಾದ ನಂಬಿಕೆಯನ್ನು ತೋರಿಸಿರುವುದನ್ನು ಐತಿಹಾಸಿಕ ಆಧಾರಗಳಿಂದ ಕಂಡುಕೊಳ್ಳಬಹುದಾಗಿದೆ.

"I myself have derived great pleasure in following the foot steps of my forefathers who were all disciples of the sringerimath, also it has been my good fortune to have the present swamjiji Sri. Abinavavidyateethaswamigalu as my spiritual guru and to have received numerous blessings from nim"ಎಂದು ಉಲ್ಲೇಖವಿರುವ ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ 30, ನವೆಂಬರ್, 1966ರ ಲೇಖನವು ಶೃಂಗೇರಿ ಮಠಕ್ಕೂ ಮೈಸೂರು ಸಂಸ್ಥಾನಕ್ಕೂ ಇರುವ ಆಧ್ಯಾತ್ಮಿಕ ಒಡನಾಟವು ಇನ್ನೂ ಮುಂದುವರೆದುಕೊಂಡು ಬಂದಿರುವುದನ್ನು ನಾವು ಕಾಣಬಹುದು.

ಹೀಗೆ ಇತಿಹಾಸದ ಆಧಾರ, ಆಕರಗಳಿಂದ ಶೃಂಗೇರಿ ಗುರುಗಳ ಆಧ್ಯಾತ್ಮಿಕ ಶಕ್ತಿಯಲ್ಲಿ ಪ್ರಬಲವಾದ ನಂಬಿಕೆಯನ್ನಿಟ್ಟ ರಾಜ ಮಹಾರಾಜರುಗಳು ರಾಜ್ಯದ ಶ್ರೇಯೋಭಿವೃದ್ಧಿ, ಶತ್ರುನಾಶ, ಯುದ್ಧದಲ್ಲಿ ವಿಜಯಶಾಲಿಯಾಗಲು, ಮಳೆಬೆಳೆ ಸುಭಿಕ್ಷೆಗಾಗಿ ಗುರುಗಳಲ್ಲಿ ನಿಕಟ ಸಂಪರ್ಕ ಹೊಂದಿದ್ದನ್ನು ಮನಗಾಣಬಹುದಾಗಿದೆ. ಈ ಒಡನಾಟವು ವಿಜಯನಗರದ ದೊರೆಗಳಿಂದ ಪ್ರಾರಂಭವಾಗಿ ಕಲೋನಿಯಲ್ ಆಡಳಿತದಲ್ಲೂ ಮುಂದುವರೆದು ಸ್ವಾತಂತ್ರ್ಯನಂತರ ಇಂದು ಪ್ರಭುತ್ವಗಳ ಆಡಳಿತವಿಲ್ಲದಿದ್ದರೂ ಭಾರತವನ್ನಾಳಿದ ಹಲವಾರು ರಾಜವಂಶಸ್ಥರು ಇಂದಿಗೂ ಗುರುಗಳ ಆಧ್ಯಾತ್ಮಿಕ ಮಾರ್ಗದರ್ಶನವನ್ನು ಪಡೆಯುತ್ತಿರುವ ವಿದ್ಯಮಾನವನ್ನು ನೋಡಿದಾಗ ಸುಮಾರು ಏಳು ಶತಮಾನಗಳ ಈ ಐತಿಹಾಸಿಕ ಸಂಬಂಧವು ಭಾರತೀಯ ಸಂದರ್ಭದ ಮತಧರ್ಮ ಹಾಗೂ ಪ್ರಭುತ್ವಗಳ ಸಂಬಂಧ ಸ್ವರೂಪಕ್ಕೆ ಇನ್ನೊಂದು ಆಯಾಮವನ್ನು ಪರಿಚಯಿಸುತ್ತದಲ್ಲದೆ ತತ್ಸಂಬಂಧ ಅಧ್ಯಯನಕ್ಕೆ ಮಹತ್ತರವಾದ ವಿಷಯ ಸಾಮಾಗ್ರಿಗಳನ್ನು ಒದಗಿಸಿಕೊಡುತ್ತದೆಂದು ಈ ಲೇಖನದ ಅಭಿಪ್ರಾಯವಾಗಿದೆ.

## ಗ್ರಂಥಋಣ

1. ಬೌರಿಂಗ್, ಎಲ್.ಬಿ., ಈಸ್ಟರ್ನ್ ಎಕ್ಸ್‌ಪೀರಿಯನಸ್, ಲಂಡನ್, 187,
2. ಗುರುಸಿದ್ದಯ್ಯ, ಯುರೋಪಿಯನ್ ಕ್ಯಾಪಿಟಲಿಸಂ ಆನ್ ಇಂಡಿಯನ್ ಸಬ್‌ಕಾಂಟಿನೆಂಟ್–ಎ ಹಿಸ್ಟಾರಿಕಲ್ ಪರ್‌ಸ್ಪೆಕ್ಟೀವ್, ಪೇಜ್ 24–33, ಜರ್ನಲ್ ಆಫ್ ಹಿಸ್ಟಾರಿಕಲ್ ಸ್ಟಡೀಸ್ ವಲ್ಯೂಂ–41, 2007, ಮೈಸೂರು ವಿಶ್ವವಿದ್ಯಾನಿಲಯ
3. ನಳಿನ ಎಸ್. ಮಠಗಳ ಇತಿಹಾಸ–ಒಂದು ಅಧ್ಯಯನ, ಪೇಜ್ 164– 172, ಜನರಲ್ ಆಫ್ ಹಿಸ್ಟಾರಿಕಲ್ ಸ್ಟಡೀಸ್, 2010, ವಲ್ಯೂಂ–44, ಮೈಸೂರು ವಿಶ್ವವಿದ್ಯಾನಿಲಯ
4. ವಾಮನ ಕಾಣೆ ಪಾಂಡುರಂಗ (ಮೂಲ), ರಾಮಚಂದ್ರ ರಾವ್ ಎಸ್.ಕೆ. ಕೃಷ್ಣಮೂರ್ತಿ ಕೆ. (ಅನುವಾದ), ಧರ್ಮಶಾಸ್ತ್ರದ ಇತಿಹಾಸ, 2012, ಸಂಪುಟ 1, ಭಾಗ 1, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ತೇಜೋಮಯಾನಂದ ಸ್ವಾಮಿ, ಹಿಂದೂ ಕಲ್ಚರ್–ಆ್ಯನ್ ಇಂಟ್ರೋಡೊಕ್ಷನ್, 1993,94, ಸೆಂಟ್ರಲ್ ಚಿನ್ಮಯ ಮಿಷನ್ ಟ್ರಸ್ಟ್, ಮುಂಬಯಿ.
6. ಬಾಲಗಂಗಾಧರಎಸ್.ಎನ್.(ಮೂಲ), ಹೆಗಡೆ ರಾಜಾರಾಮ (ಕನ್ನಡ ನಿರೂಪಣೆ), ಬೌದ್ಧಿಕ ದಾಸ್ಯದಲ್ಲಿ ಭಾರತ ವಾಲ್ಯೂಂ–1 2015, ನಿಲುಮೆ ಪ್ರಕಾಶನ, ಉತ್ತರ ಕನ್ನಡ.
7. ಹೆಗಡೆ ರಾಜರಾಮ, ವಸಾಹತು ಪೂರ್ವ ಕರ್ನಾಟಕದ ರಾಜ್ಯ ಪದ್ಧತಿ, 2008, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,
8. ಬಾಲಗಂಗಾಧರ, ಎಸ್.ಎನ್, ದ ಪ್ಯೂಚರ್ ಆಫ್ ದ ಪ್ರಸೆಂಟ್– ಥಿಂಕಿಂಗ್ ಥ್ರೂ ಓರಿಯಂಟಲಿಸಂ, 1998, ಕಲ್ಚರಲ್ ಡೈನಾಮಿಕ್ಸ್ 10, ನಂ–2
9. ಬಾಲಗಂಗಾಧರ. ಎಸ್.ಎನ್. ಹೀದನ್ ಇನ್ ಹಿಸ್ ಬ್ಲೈಂಡ್‌ನೆಸ್ ಏಷಿಯಾದ ವೆಸ್ಟ್ ಎಂಡ್ ದ ಡೈನಾಮಿಕ್ ಆಫ್ ರಿಲಿಜನ್, 2005, ಮನೋಹರ್
10. ಇಂಡೆನ್ ರೊನಾಲ್ಡ್, ಓರಿಯಂಟಲಿಸ್ಟ್ ಕಸ್ಟ್ರಕ್ಷನ್ಸ್ ಆಫ್ ಇಂಡಿಯಾ ಇನ್ ಮಾರ್ಡನ್ ಏಷಿಯಾ ಸ್ಟಡೀಸ್ 3